**ಪ್ರಧಾನ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ**

**ಸಿ ಸಿ ನಂ. 84/2024**

| | | |
|---|---|---|
| ಹೆಸರು | ಎಸ್ ಬಿ ಶಿವಕುಮಾರ | PW –1 |
| ತಂದೆಯ ಹೆಸರು | ಬಸವರಾಜ | CW –1 |
| ವಯಸ್ಸು | 51 ವರ್ಷ | |
| ಉದ್ಯೋಗ | ಆಹಾರ ನಿರೀಕ್ಷಕರು, ಹರಿಹರ | ದಿನಾಂಕಃ 23–01–2025 |
| ವಾಸ | ಹರಿಹರ | |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಖ್ಯ ವಿಚಾರಣೆ ಸಸಅ ರವರಿಂದ ಃ**

ಸನ್ 2021 ರಿಂದ ಇಲ್ಲಿಯವರೆಗೆ ನಾನು ಆಹಾರ ನಿರೀಕ್ಷಕನಾಗಿ ಹರಿಹರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 15.10.2022 ರಂದು ನಾನು ಗ್ರಾಮ ವಾಸ್ತವ್ಯ ಕಾರ್ಯಕ್ರಮವನ್ನು ಮುಗಿಸಿಕೊಂಡು ಸಂಜೆ 6.00 ಗಂಟೆ ಸಮಯದಲ್ಲಿ ಹರಿಹರದ ಕಛೇರಿಯಲ್ಲಿದ್ದಾಗ ಬಾತ್ಮಿದಾರರಿಂದ ಗುತ್ತೂರು ಗ್ರಾಮದ ಹರಿಹರ ಹರಪನಹಳ್ಳಿ ರಸ್ತೆಯಲ್ಲಿ ಒಂದು ಬೈಕ್ ನಲ್ಲಿ ಯಾರೋ ಒಬ್ಬ ವ್ಯಕ್ತಿ ಪಡಿತರ ರಾಗಿಯನ್ನು ಸಾರ್ವಜನಿಕರಿಂದ ಕಡಿಮೆ ಬೆಲೆಗೆ ತೆಗೆದುಕೊಂಡು ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಉದ್ದೇಶದಿಂದ ಅಕ್ರಮವಾಗಿ ಅಡಿತರ ರಾಗಿಯನ್ನು ಸಾಗಾಟ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದ ಮೇರೆಗೆ ನಾನು ಹರಿಹರ ಗ್ರಾಮಾಂತರ ಠಾಣೆಗೆ ತೆರಳಿ ಅಕ್ರಮ ರಾಗಿ ಸಾಗಾಣಿಕೆ ಮಾಡುತ್ತಿರುವ ಕುರಿತು ದೂರನ್ನು ಸಲ್ಲಿಸಿರುತ್ತೇನೆ. ಸದರಿ ದೂರನ್ನು ಸಾಕ್ಷಿಯು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ನಂತರ ಕೂಡಲೇ ಪೊಲೀಸರು ಇಬ್ಬರು ಸಾಕ್ಷಿದಾರರನ್ನು ಪಂಚರನ್ನಾಗಿ ಬರಮಾಡಿಕೊಂಡು, ಪೊಲೀಸರು, ಪಂಚರು ಮತ್ತು ನಾನು ಇಲಾಖಾ ವಾಹನದಲ್ಲಿ ಗುತ್ತೂರು ಗ್ರಾಮದ ಗಣೇಶ ಗುಡಿ ಹತ್ತಿರ ಹೋಗಿ ನಿಂತುಕೊಂಡಾಗ ಒಬ್ಬ ವ್ಯಕ್ತಿ ಪಡಿತರ ರಾರಿಯನ್ನು ತನ್ನ ಬೈಕ್ ಮೇಲೆ ತೆಗೆದುಕೊಂಡು ಬರುತ್ತಿದ್ದನ್ನು ಗಮನಿಸಿ, ಚಾಸಾ 15 ರವರು ಸರಿದ ವಾಹನವನ್ನು ತಡೆದು ನಿಲ್ಲಿಸಿದರು. ನಂತರ ಚಾಸಾ 15 ರವರು ಸದರಿ ಬೈಕ್ ಮೇಲೆ ಇಟ್ಟಿದ್ದ 4 ಚೀಲಗಳನ್ನು ಪರಿಶೀಲನೆ ಮಾಡಿದಾಗ ಅದರಲ್ಲಿ ಪಡಿತರ ರಾಗಿ ಇದೆ ಎಂದು ಖಚಿತಪಡಿಸಿಕೊಂಡು ಚಾಸಾ 15 ರವರು ಸದರಿ ವ್ಯಕ್ತಿಯ ಹೆಸರು ಕೇಳಲಾಗಿ ಆತನು ವೆಂಕಟೇಶ ನಾಯ್ಕ ತಿಳಿಸಿರುತ್ತಾನೆ. ನಂತರ ಪಂಚರ ಸಮಕ್ಷಮ ಸದರಿ ಚೀಲಗಳನ್ನು ತೂಕ ಮಾಡಿದಾಗ ಮೂರು ಚೀಲಗಳಲ್ಲಿ ತಲಾ 40 ಕೆಜಿ ಮತ್ತು ಇನ್ನೊಂದು ಚೀಲದಲ್ಲಿ 20 ಕೆಜಿ ತೂಕದ ರಾಗಿ ಇದ್ದು, ಒಟ್ಟು 145 ಕೆಜಿಯ ಪಡಿತರ ರಾಗಿ ಇರುವುದು ಕಂಡುಬಂದಿರುತ್ತದೆ. ನಂತರ ನಾಲ್ಕು ಚೀಲಗಳಿಂದ ತಲಾ 1 ಕೆಜಿ ತೂಕದ ಪಡಿತರ ರಾಗಿಯನ್ನು

ಮಾದರಿಗಾಗಿ ತೆಗೆದು, ಅದನ್ನು ಒಂದು ಬಿಳಿ ಚೀಲದಲ್ಲಿ ಹಾಕಿ ಸೀಲ್ ಮಾಡಿ, ಪಂಚನಾಮೆ ಜರುಗಿಸಿ, ರಾಗಿಯನ್ನು ಜಪ್ತುಪಡಿಸಿಕೊಳ್ಳಲಾಯಿತು. ನಂತರ ದ್ವಿಚಕ್ರ ವಾಹನವನ್ನು ಪರಿಶೀಲಿಸಲಾಗಿ ಅದು ಟಿ ವಿ ಎಸ್ ಕಂಪನಿಯ ಕೆ ಎ 17 ಹೆಚ್ ಎಲ್ 5009 ಆಗಿರುತ್ತದೆ. ನಂತರ ಪೊಲೀಸರು ಜುಪ್ತಪಡಿಸಿಕೊಂಡ ಮಾಲನ್ನು ಹಾಗೂ ವ್ಯಕ್ತಿಯನ್ನು ಮತ್ತು ವಾಹನವನ್ನು ಠಾಣೆಗೆ ತೆಗೆದುಕೊಂಡು ಹೋಗಿರುತ್ತಾರೆ. ಸದರಿ ಪಂಚನಾಮೆ ಜರುಗಿಸಿದ ಕಾಲಕ್ಕೆ ಪೊಲೀಸರು ಒಂದು ಛಾಯಾಚಿತ್ರವನ್ನು ತೆಗೆದಿರುತ್ತಾರೆ. ಸದರಿ ಪಂಚನಾಮೆಯನ್ನು ನಿಪಿ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ 2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯ ಸದರಿ ಎರಡು ಛಾಯಾಚಿತ್ರಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ನಿಪಿ 3 ಮತ್ತು 4 ಎಂದು ಗುರುತಿಸಲಾಯಿತು.

ನಂತರ ದಿನಾಂಕ 06.05.2023 ರಂದು ಜಪ್ತುಪಡಿಸಿಕೊಂಡಿದ್ದ ಪಡಿತರ ರಾಗಿ ಯನ್ನು ಚಾಸಾ 13 ಮತ್ತು 14 ರವರ ಸುಮಕ್ಷಮ ಪೊಲೀಸರು ಬಿಡುಗಡೆ ಪಂಚನಾಮೆ ಜರುಗಿಸಿ, ಪಡಿತರ ರಾಗಿಯನ್ನು ನನ್ನ ವಶಕ್ಕೆ ನೀಡಿರುತ್ತಾರೆ. ಸದರಿ ಪಂಚನಾಮೆಯನ್ನು ನಿಪಿ 5 ಎಂದು, ಸಾಕ್ಷಿಯ ಸಹಿಯನ್ನು ನಿಪಿ 5(ಎ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ಒಂದು ಛಾಯಾಚಿತ್ರವನ್ನು ತೆಗೆದಿರುತ್ತಾರೆ. ನಂತರ ನಾನು ಸದರಿ ಪಡಿತರ ರಾಗಿಯನ್ನು ಮಾನ್ಯ ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ಗೋದಾಮಿನಲ್ಲಿ ಇಟ್ಟುರುತ್ತೇನೆ. ಸಾಕ್ಷಿಯು ಈ ದಿನ ನ್ಯಾಯಾಲಯದಲ್ಲಿ ಹಾಜರಿದ್ದ ಆರೋಪಿಯನ್ನು ಮತ್ತು ಮಾದರಿಗಾಗಿ ತೆಗೆದ 4 ಕೆ ಜಿ ಅಕ್ಕಿ ಚೀಲವನ್ನು ನೋಡಿ ಗುರುತಿಸುತ್ತಾರೆ. ಸದರಿ ಅಕ್ಕಿ ಚೀಲಗಳನ್ನು ಮು.ಮಾ 1 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ನಾನು ಪಿರ್ಯಾದನ್ನು ಯಾವ ರೀತಿ ಕೊಟ್ಟಿದ್ದೇನೆ ಎಂದು ನನಗೆ ಗೊತ್ತಿಲ್ಲ. ನಾನು ಯಾವ ಗ್ರಾಮದಲ್ಲಿ ವಾಸ್ತವ್ಯಕ್ಕೆ ಹೋಗಿದ್ದೆ ಎಂದು ಪೊಲೀಸರಿಗೆ ದಾಖಲೆಯನ್ನು ನೀಡಿರುವುದಿಲ್ಲ. ನಮ್ಮ ಕಛೇರಿಯ ಅವಧಿ ಬೆಳಿಗ್ಗೆ 10.00 ರಿಂದ 5.30 ಗಂಟೆವರೆಗೆ ಇರುತ್ತದೆ. ನಾನು ಸಂಜೆ 6.00 ಗಂಟೆಗೆ ಬಂದಾಗ ನಮ್ಮ ಕಛೇರಿಯ ಗೇಟ್ ತೆಗೆದಿತ್ತು. ಸಾಕ್ಷಿಯು ಮುಂದುವರೆದು ಗ್ರಾಮ ವಾಸ್ತವ್ಯ ಇದುದ್ದರಿಂದ ಗೇಟ್ ತೆರೆದಿತ್ತು. ಗ್ರಾಮ ವಾಸ್ತವ್ಯ ಮಾಡಿದ ಬಗ್ಗೆ ದಾಖಲೆಗಳನ್ನು ಹಾಜರಪಡಿಸಿಲ್ಲ ಎಂದರೆ ಸರಿ. ಗ್ರಾಮ ವಾಸ್ತವ್ಯ ಎಂದರೆ ನಾವು ಹಳ್ಳಿಗಳಲ್ಲಿ ತಂಗಬೇಕು ಎಂದರೆ ಸರಿ. ನಿಪಿ 1 ದೂರಿನಲ್ಲಿ ಬಾತ್ಮಿ ಯಾವ ರೀತಿಯಾಗಿ ಬಂದಿತು ಎಂದು ಬರೆದಿಲ್ಲ ಎಂದರೆ ಸರಿ. ನಾನು ದೂರನ್ನು ಸಲ್ಲಿಸಿದಾಗ ಸಮಯ ಸುಮಾರು 6.30 ಗಂಟೆ ಆಗಿತ್ತು. ಪಂಚನಾಮೆ ಕಾಲಕ್ಕೆ ತೂಕ ಮಾಡಿ ನೋಡಲಾಗಿರುತ್ತದೆ. ತೂಕದ ಯಂತ್ರ ಆರೊಪಿಯ ಬಳಿ ಇತ್ತು. ಪ್ರತಿಯೊಂದು ಚೀಲವನ್ನು ತೂಕ ಮಾಡಿದ ಬಗ್ಗೆ ಛಾಯಾಚಿತ್ರಗಳು ಇಲ್ಲ ಎಂದರೆ ಸರಿ. ನಿಪಿ 2 ಪಂಚನಾಮೆಯಲ್ಲಿ 1 ನೇ ಚೀಲದಲ್ಲಿ 40 ಕೆ ಜಿ 100 ಗ್ರಾಂ ಎಂದು ನಮೂದು ಇದೆ ಎಂದರೆ ಸರಿ. ಅದೇ ರೀತಿ 2 ನೇ ಚೀಲದಲ್ಲಿ 40 ಕೆ ಜಿ 150 ಗ್ರಾಂ ಮತ್ತು 3 ನೇ ಚೀಲದಲ್ಲಿ 40 ಕೆ ಜಿ ಎಂದು ಹಾಗೂ 4 ನೇ ಚೀಲದಲ್ಲಿ 25 ಕೆಜಿ ಎಂದು ನಮೂದು ಇದೆ ಎಂದರೆ ಸರಿ. ಸದರಿ ಎಲ್ಲ ಚೀಲಗಳಲ್ಲಿಯ ರಾಗಿಯನ್ನು ತೂಕ ಮಾಡಿದರೆ ಒಟ್ಟು 145 ಕೆ ಜಿ 250 ಗ್ರಾಂ ಆಗುತ್ತದೆ ಎಂದರೆ ಸರಿ.

ನಿಪಿ 2 ಪಂಚನಾಮೆ ಬರೆಯಲು ಮಾಹಿತಿಯನ್ನು ಪೊಲೀಸರು ನೀಡಿರುತ್ತಾರೆ. ಪಂಚನಾಮೆಯಲ್ಲಿ ತೂಕ ಮಾಡಿದ ನಂತರ 145 ಕೆ.ಜಿ. ಎಂದು ನಮೂದು ಇದ್ದು, ಅದು ತಪ್ಪಾಗಿ ನಮೂದು ಆಗಿದೆ ಎಂದು ನಾವು ಪೊಲೀಸರಿಗೆ ಹೇಳಿರುವುದಿಲ್ಲ. ರಾಗಿ ಚೀಲಗಳಿಂದ ಮಾದರಿಗಾಗಿ ತಲಾ ಒಂದು ಕೆ.ಜಿ. ರಾಗಿಯನ್ನು ತೆಗೆಯುವ ಕಾಲಕ್ಕೆ ಛಾಯಾಚಿತ್ರವನ್ನು ತೆಗೆದಿಲ್ಲ ಎಂದರೆ ಸರಿ. ಆ ರೀತಿ ಛಾಯಾಚಿತ್ರ ತೆಗೆಯಲು ತೊಂದರೆ ಇರಲಿಲ್ಲ ಎಂದರೆ ಸರಿ. ನಿಪಿ–3 ಮತ್ತು 4 ರ ಛಾಯಾಚಿತ್ರಗಳಲ್ಲಿ, ಚೀಲಗಳಲ್ಲಿ ರಾಗಿ ಇತ್ತು ಎಂದು ಕಾಣುತ್ತಿಲ್ಲ ಎಂದರೆ ಸರಿ. ನನ್ನ ಸಮಕ್ಷಮ ಪಂಚನಾಮೆ ಕಾಲಕ್ಕೆ ಪೊಲೀಸರು ಆರೋಪಿಯ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ. ಜಪ್ತಿ ಪಡಿಸಿಕೊಂಡ ರಾಗಿ ಚೀಲಗಳ ಮೇಲೆ ವೆಂಕಿಸ್ ಫಿಶ್ ಪೌಲ್ಟ್ರಿ ಫಾರಂ ಅಂತ ಇತ್ತು. ನಿಪಿ–3 ಮತ್ತು 4 ರಲ್ಲಿ ಕಾಣಿಸುತ್ತಿರುವ ತೂಕದ ಯಂತ್ರದಲ್ಲಿ ಚೀಲಗಳು ಎಷ್ಟು ತೂಕ ಇತ್ತು ಎಂದು ಕಾಣಿಸುತ್ತಿಲ್ಲ ಎಂದರೆ ಸರಿ. ಬಿಳಿ ಚೀಲಗಳನ್ನು ಪೊಲೀಸರು ತಂದಿರುತ್ತಾರೆ. ಜಪ್ತಿ ಪಡಿಸಿಕೊಂಡ ಚೀಲಗಳ ಮೇಲೆ ಪಂಚರ, ಪೊಲೀಸರ ಮತ್ತು ನನ್ನ ಸಹಿಗಳನ್ನು ಪಡೆದು, ಚೀಟಿಯನ್ನು ಅಂಟಿಸಿಲ್ಲ ಎಂದರೆ ಸರಿ. ಅದೇ ರೀತಿ ಪೊಲೀಸರು ಜಪ್ತಿ ಪಡಿಸಿಕೊಂಡ ರಾಗಿ ಚೀಲದ ಯಾದಿಯನ್ನು ನನ್ನ ಸಮಕ್ಷಮ ತಯಾರು ಮಾಡಿಲ್ಲ ಎಂದರೆ ಸರಿ. ನಿಪಿ–5 ರಲ್ಲಿ ಪೊಲೀಸರು 145 ಕೆ.ಜಿ. ರಾಗಿಯನ್ನು ನನ್ನ ವಶಕ್ಕೆ ಕೊಟ್ಟಿದ್ದಾರೆ ಎಂದು ನಮೂದು ಇದೆ ಎಂದರೆ ಸರಿ. ನಿಪಿ–5 ಪಂಚನಾಮೆ ಕಾಲಕ್ಕೆ ತೂಕ ಮಾಡಿಲ್ಲ ಎಂದರೆ ಸರಿ. ಮಾನ್ಯ ಜಿಲ್ಲಾಧಿಕಾರಿಗಳು ನಾನು ವಶಕ್ಕೆ ಪಡೆದ ರಾಗಿಯನ್ನು ಮಾರಾಟ ಮಾಡುವಂತೆ ಆದೇಶ ಮಾಡಿದ್ದರು. ನಾನು ಮಾನ್ಯ ಜಿಲ್ಲಾಧಿಕಾರಿಗಳ ಆದೇಶದಂತೆ ರಾಗಿಯನ್ನು ಮಾರಾಟ ಮಾಡಿದ ಬಗ್ಗೆ ಯಾವುದೇ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಮಾನ್ಯ ಜಿಲ್ಲಾಧಿಕಾರಿಗಳ ಆದೇಶದಂತೆ ರಾಗಿಯನ್ನು ಮಾರಾಟ ಮಾಡಿದ ಬಗ್ಗೆ ದಾಖಲಾತಿಗಳು ಇರುತ್ತವೆ ಎಂದರೆ ಸರಿ. ಪೊಲೀಸರು ಮತ್ತು ನಾವು ಶಾಮೀಲಾಗಿ ಆರೋಪಿತನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ, ಸುಳ್ಳು ಪಂಚನಾಮೆಯನ್ನು ಜರುಗಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಿದೆ)

ಓ ಹೇ ಕೇ ಸರಿ ಇದೆ

Sd/–

ಸಿ/ಸಿ. ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಮ್‌ಎಫ್ ಸಿ ನ್ಯಾಯಾಲಯ, ಹರಿಹರ.